# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ

**ಸಿ.ಸಿ.ನಂ.176/2015**

ಫಿರ್ಯಾದಿ: ಕರ್ನಾಟಕ ಸರಕಾರ ಪರ ಸೇಡಂ ಪೊಲೀಸ್ ಠಾಣೆ

: ವಿರುದ್ಧ :

**ಆರೋಪಿ:** ಚನ್ನಪ್ಪ ತಂದೆ ವಾಲು ರಾಠೋಡ್, ವ: 23 ವರ್ಷ,
ಉ: ಲಾರಿ ಚಾಲಕ, ಸಾ: ಕೊಡದೂರ, ತಾ: ಚಿತ್ತಾಪುರ,
ಹಾ:ವ: ಹಮಾಲಿ ಕ್ವಾಟರ್ಸ್, ತರನಳ್ಳಿ ಕ್ರಾಸ್, ಸೇಡಂ

*****

## ದೋ ಷಾ ರೋ ಪ ಣೆ

ನಾನು **ಶ್ರೀ ಮಹಾದೇವ ಕಾನಟ್ಟಿ, ಬಿಕಾಂ ಎಲ್ ಎಲ್ ಬಿ.,** ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಸೇಡಂ, ನಿನ್ನ ಮೇಲೆ ಹೊರಿಸುವ ಆರೋಪವೆನೆಂದರೆ,

ದಿನಾಂಕ 02-07-2014ರಂದು ರಾತ್ರಿ 10-00 ಗಂಟೆ ಸುಮಾರಿಗೆ ಸೇಡಂ ಪೊಲೀಸ್ ಠಾಣಾ ವ್ಯಾಪ್ತಿಯ ಸೇಡಂ ಪಟ್ಟಣದ ತರನಳ್ಳಿ ಕ್ರಾಸ್ ಹತ್ತಿರ ನ್ಯಾಯಬೆಲೆ ಅಂಗಡಿ ಸಂಖ್ಯೆ 81ರಲ್ಲಿ ಸಾರ್ವಜನಿಕ ವಿತರಣಾ ಪದ್ಧತಿ ಅಡಿಯಲ್ಲಿ ಕಾರ್ಡುದಾರರಿಗೆ ವಿತರಿಸಬೇಕಾದ ಆಹಾರ ಧಾನ್ಯಗಳನ್ನು ನಿನ್ನ ಸ್ವಂತ ಲಾಭಕ್ಕೋಸ್ಕರ ಕಾಳಸಂತೆಯಲ್ಲಿ ಮಾರಾಟ ಮಾಡಲು ಅಕ್ರಮವಾಗಿ ಲಾರಿ ನಂ.ಎಪಿ-27-ಡಬ್ಲ್ಯೂ-9637 ನೇದ್ದರಲ್ಲಿ ಅಕ್ಕಿ, ಗೋಧಿಯನ್ನು ಚಾಸಾ-10 ರಿಂದ 13ರವರಿಂದ ತುಂಬಿಸುತ್ತಿದ್ದಾಗ, ಚಾಸಾ-1, 7, 8 ನೇದ್ದವರು ಕೂಡಿಕೊಂಡು ಚಾಸಾ-4 ರಿಂದ 6ನೇದ್ದವರ ಸಮಕ್ಷಮ ದಾಳಿ ಮಾಡಿದಾಗ ಆರೋಪಿ ನಂ.2ನೇದ್ದವನು ಓಡಿಹೋಗಿದ್ದು, ಆರೋಪಿತನಾದ ನೀನು ಚಾಸಾ-9ನೇದ್ದವನಿಗೆ ಲೋಡ್ ಮಾಡಿ ಕಳುಹಿಸುವಂತೆ ಹೇಳಿದ್ದು, ಆ ಮೂಲಕ ಅವಶ್ಯಕ ವಸ್ತುಗಳ ಕಾಯ್ದೆ ಕಲಂ 3 ಮತ್ತು 4ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಇದು ನನ್ನ ಸಂಜ್ಞೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾದಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

Kanatti 13/6/18

ಪ.ದ.ನ್ಯಾ.ದಂ. ಸೇಡಂ.

ದಿನಾಂಕ 13-06-2018